

## ಬಿಂದಾಸ್ ದೀಪಿಕಾ

ದೀಪಿಕಾ ಪಡುಕೋಣೆಯದ್ದು ಸದ್ಯಕ್ಕೆ ಬಿಂದಾಸ್ ನೋಟ. 'ಕಾಕ್‌ಟೇಲ್' ಸಿನಿಮಾ ಕಲೆಕ್ಷನ್ ಕಥೆ ಏನೇ ಆದರೂ, ಈ ಚಿತ್ರದಲ್ಲಿ ದೀಪಿಕಾ ಕಾಣಿಸಿಕೊಂಡಿರುವ ರೀತಿ ಮಾತ್ರ ಅಭಿಮಾನಿಗಳನ್ನು ಹುಚ್ಚೆಬ್ಬಿಸಿದೆ. ದೀಪಿಕಾಳ ಫ್ಯಾಶನ್ ಪ್ರಜ್ಞೆಯ ಬಗ್ಗೆಯೂ ಬಾಲಿವುಡ್‌ನಲ್ಲಿ ಸಖತ್ ಮೆಚ್ಚುಗೆಯ ಮಾತುಗಳು ಕೇಳಿಬರುತ್ತಿವೆ. 'ಬಾಕ್ಸಾಫೀಸ್‌ನಲ್ಲಿ ಈ ಚಿತ್ರ ಎದ್ದರೂ, ಬಿದ್ದರೂ ನನಗೆ ಚಿಂತೆಯಿಲ್ಲ. ನಾನಂತೂ ಈ ಚಿತ್ರದ ವೆರೋನಿಕಾಳ ಪಾತ್ರಕ್ಕೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ಭಾವುಕವಾಗಿ ನೂರು ಶೇಕಡಾ ಪ್ರಯತ್ನ ಹಾಕಿದ್ದೇನೆ' ಎಂದು ಸಿನಿಮಾ ಬಿಡುಗಡೆಗೂ ಮುಂಚೆಯೇ ದೀಪಿಕಾ ಬಿಂದಾಸ್ ಹೇಳಿಕೆ ನೀಡಿದ್ದಳು. ಆಕೆ ಹೇಳಿದಂತೆಯೇ ಚಿತ್ರದಲ್ಲಿ ಮೀರಾ ಪಾತ್ರಧಾರಿ ಡಯಾನಾಳನ್ನು ಎಲ್ಲ ವಿಧದಲ್ಲೂ ಹಿಂದಿಕ್ಕಿದ್ದಾಳೆ. ಸೈಫ್ ಅಲಿ ಖಾನ್ ಜತೆಗೆ ದೀಪಿಕಾಳ ಕೆಮಿಸ್ಟ್ರಿ ಪ್ರೇಕ್ಷಕರಿಗೂ ಮೆಚ್ಚುಗೆ ಆದಂತಿದೆ. 'ಸೈಫ್‌ಗೆ ವಯಸ್ಸಾಗಿದೆ ಎಂದವರು ಯಾರು? ಈಗಲೂ ಆತ ಸಂಪೂರ್ಣ ಫಿಟ್' ಎಂದೂ ದೀಪಿಕಾ ಹೇಳಿರುವುದು ಕರೀನಾ ಕಪೂರ್‌ಗೆ ಕೇಳಿಸಿದೆಯೋ ಇಲ್ಲವೋ!

ಸೈಫ್ ಜತೆಗೆ 'ಲವ್ ಆಜ್ ಕಲ್'ನಲ್ಲಿ ನಟಿಸಿದಾಗಲೇ ಪ್ರೇಕ್ಷಕರು ಈ ಜೋಡಿಯನ್ನು ಮೆಚ್ಚಿಕೊಂಡಿದ್ದರು. ಈಗ 'ಕಾಕ್‌ಟೇಲ್' ಬಳಿಕ ತೆರೆಗೆ ಬರಲು 'ರೇಸ್-2' ಸಿದ್ಧವಾಗುತ್ತಿದೆ. ಅದರಲ್ಲೂ ಈ ಜೋಡಿ ಸಖತ್ ಮಿಂಚಿದೆ. 'ಕಾಕ್‌ಟೇಲ್'ನಲ್ಲಿ ಸುದೀರ್ಘ ಚುಂಬನದಷ್ಟೇ ಆಕರ್ಷಕವಾದ ದೃಶ್ಯವೊಂದರಲ್ಲಿ ಬಿಡುಬೀಸಾಗಿ ನಟಿಸಿರುವ ದೀಪಿಕಾ, 'ತಮಾಷೆಯ ಕಥೆಗೆ ಆ ದೃಶ್ಯ ಅಗತ್ಯವಿತ್ತು. ಅದೇನೂ ದೊಡ್ಡ ಸಂಗತಿಯಲ್ಲ' ಎಂದಿರುವುದೂ ಆಕೆಯ ಬಿಂದಾಸ್ ನಡವಳಿಕೆಗೆ ಸಾಕ್ಷಿ.

ಸೂಪರ್‌ಸ್ಟಾರ್ ರಜನೀಕಾಂತ್ ಜತೆಗೆ 'ಕೋಚಡಯ್ಯನ್' ಚಿತ್ರದಲ್ಲಿ ನಟಿಸಿ ಈಗಾಗಲೆ ಸುದ್ದಿಯ ಶೃಂಗದಲ್ಲಿರುವ ದೀಪಿಕಾ, ರಜನಿಯ ನಟನಾ ವೇಗದ ಬಗ್ಗೆ ತುಂಬು ಮೆಚ್ಚುಗೆ ವ್ಯಕ್ತಪಡಿಸಿದ್ದಾಳೆ. 'ಅವರು ಸೆಟ್‌ಗೆ ಬಂದರೆ ಅಲ್ಲಿ ವಿದ್ಯುತ್ ಪ್ರವಹಿಸಿದಂತೆ. ಶೂಟಿಂಗ್‌ನಲ್ಲಿ ಸದಾ ಜೋಶ್ ತೋರುವ ರಜನಿ ಸಾರ್ ಜತೆ ನಟಿಸುವುದು ಕಷ್ಟ ಆಗಲಿಲ್ಲ. ಅಮಿತಾಭ್ ಬಚ್ಚನ್ ಅವರೂ ಹೀಗೆಯೇ ಸೆಟ್‌ನಲ್ಲಿ ಸದಾ ಜೋಶ್ ಸೃಷ್ಟಿಸುತ್ತಾರೆ. ಇಬ್ಬರೂ ಮಹಾನ್ ನಟರು' ಎನ್ನುವುದು ದೀಪಿಕಾ ಮೆಚ್ಚುಗೆಯ ಮಾತು.

## ಹಾಡುಗಳ ಕಳ್ಳತನ!

ಬಾಲಿವುಡ್‌ನಲ್ಲಿ ವಿದೇಶಿ ಹಾಡುಗಳನ್ನು ಕದ್ದು ಸ್ವದೇಶೀ ದಾಖಲೆ ಮಾಡುವ ಪರಂಪರೆ ಮುಂದುವರಿದೇ ಇದೆ. ಸಲ್ಮಾನ್ ಖಾನ್‌ನ 'ಬಾಡಿಗಾರ್ಡ್' ಚಿತ್ರದಲ್ಲಿ ರಾಗ ಕದ್ದರೂ ಅತ್ಯಂತ ಜನಪ್ರಿಯವಾದ 'ತೇರಿ ಮೇರಿ' ಹಾಡು, ಬಹುಶಃ ಈ ನಿಟ್ಟಿನಲ್ಲಿ ಸಂಗೀತ ನಿರ್ದೇಶಕರಿಗೆ ಹೊಸ ಸ್ಫೂರ್ತಿ ನೀಡುತ್ತಿರಬೇಕು. ಇದೀಗ ಜಿಸ್ಮ್-2 ಚಿತ್ರದಲ್ಲಿ 'ಯೆ ಜಿಸ್ಮ್ ಹೈ ತೊ ಕ್ಯಾ' ಎನ್ನುವ ಹಾಡು ಸಖತ್ ಸುದ್ದಿ ಮಾಡುತ್ತಿದೆ. ಸನ್ನಿ ಲಿಯೋನ್ ಮತ್ತು ರಣ್‌ದೀಪ್ ಹೂಡಾ ನಡುವಣ ರೋಮಾನ್ಸ್‌ನ ಈ ಹಾಡು, ಬೆಂಗು ಎಂಬ ಗಾಯಕನ ಜನಪ್ರಿಯ ಟರ್ಕಿಶ್ ಭಾಷೆಯ ಆಲ್ಬಂನಿಂದ ಕದ್ದದ್ದು ಎನ್ನುವುದೀಗ ಬಯಲಾಗಿದೆ. ಆದರೆ ಸಂಗೀತ ನಿರ್ದೇಶಕ ಎ.ಪಿ.ಮುಖರ್ಜಿ ಪ್ರಕಾರ, 'ಎರಡೂ ಹಾಡುಗಳ ದಾಟಿ ಒಂದೇ ತರಹ ಇರುವುದು' ವಿಚಿತ್ರ ಕಾಕತಾಳೀಯವಂತೆ!

ಸೈಫ್ ಅಲಿ ಖಾನ್‌ನ 'ಏಜೆಂಟ್ ವಿನೋದ್' ಚಿತ್ರದಲ್ಲಿ ತುಂಬಾ ಜನಪ್ರಿಯವಾದ 'ಪ್ಯಾರ್ ಕಿ ಪುಂಗಿ' ಹಾಡು ಕೂಡಾ ಇರಾನಿನ ಜನಪ್ರಿಯ ಬ್ಯಾಂಡ್, 'ಬಾರೋಬಾಕ್ಸ್'ನ ಹಿಟ್ ಹಾಡೊಂದರ ನಕಲು ಎನ್ನುವುದು ಈ ಹಿಂದೆಯೇ ಸುದ್ದಿಯಾಗಿತ್ತು. ಒಟ್ಟಾರೆ ಶ್ರಮವಿಲ್ಲದೆ ಕದ್ದು ಟ್ಯೂನ್ ಹಾಕುವುದು ನಡೆದೇ ಇದೆ. ಅದರಲ್ಲೂ ಮೊದಲ ಚಿತ್ರಕ್ಕೆ ಸಂಗೀತ ನೀಡಿರುವ ಮುಖರ್ಜಿಯಂತಹ ಉದಯೋನ್ಮುಖರೂ ಇಂತಹ ಸಾಹಸಕ್ಕೆ ಕೈ ಹಾಕುವುದು ಬಾಲಿವುಡ್‌ನಲ್ಲಿ ಸಂಗೀತದ ಅಭಿರುಚಿ ಕಡಿಮೆಯಾಗುತ್ತಿರುವುದರ ದ್ಯೋತಕವೂ ಹೌದು!

■ ಬಿಂದು



ಜಿಸ್ಮ್-2 ಚಿತ್ರದ ಹಾಡಿನ ದೃಶ್ಯ